ಶ್ರೀ ಎಸ್ ಎ ರವೀಂದ್ರನಾಥ್ ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ

ಶ್ರೀ ಎಸ್ ಎಸ್ ಪಾಟೀಲ್ ಮಂತ್ರಿಗಳ ಬಗ್ಗೆ ನಮ್ಮ ತಕರಾರು ಇಲ್ಲ, ಆದರೆ ಯಾರು ತಪ್ಪು ಮಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು

ಅಧ್ಯಕ್ಷರು ಅಯಿತು ಅವರು ಹೇಳುತ್ತಾರೆ ಬಿಡಿ

ಶ್ರೀ ಎಸ್ ಎ ರವೀಂದ್ರನಾಥ್ ಯಾರು ಅಧಿಕಾರಿಗಳು ತಪ್ಪು ಮಾಡಿದ್ದಾರೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಂಡು ಅವರನ್ನು ಮನೆಗೆ ಕಳುಹಿಸತಕ್ಕಂಧ ಕೆಲಸ ನಾನು ಮಾಡುತ್ತೇನೆ

ಕೃಷಿಮಾರುಕಟ್ಟೆಗಳಿಗೆ ಅಧಿಕಾರ ನೀಡುವುದು

59(134) ಶ್ರೀ ಡಿ ಆರ್ ಪಾಟೀಲ್ (ಗದಗ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಈಗಿರುವ ವ್ಯವಸ್ಥೆಯಲ್ಲಿ ಕೃಷಿ ಮಾರುಕಟ್ಟೆಗಳಿಗೆ ಕಾನೂನಿನಲ್ಲಿರುವ ಸ್ವಾಯತ್ತತೆಯನ್ನು ಸುತ್ತೋಲೆಗಳ ಹಾಗೂ ನಿಯಮಗಳ ಮುಖಾಂತರ ಮೊಟಕುಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಈ ರೀತಿ ಶಾಸಕಾಂಗ ನೀಡಿರುವ ಅಧಿಕಾರವನ್ನು ಪುನಃ ಕೃಷಿ ಮಾರುಕಟ್ಟೆಗಳಿಗೆ ಕೂಡಲು ಸರ್ಕಾರ ಕ್ರಮ ಕೈಗೊಳ್ಳುವುದೆ ,

ಇ) ಸರ್ಕಾರದ ಯಾವುದೇ ಅನುದಾನವಿಲ್ಲದಿದ್ದರೂ ಅನುದಾನ ಪಡೆಯುತ್ತಿರುವ ಪಂಚಾಯತ್ ರಾಜ್ ಸಂಸ್ಥೆಗಳಿಗಿಂತ ಕಡಿಮೆ ಸ್ವಾಯತ್ತತೆಯನ್ನು ಈ ಸಂಸ್ಥೆಗಳು ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ ,

ಈ) ಕೃಷಿ ಮಾರುಕಟ್ಟೆ ಸಂಸ್ಥೆಗಳಿಗೆ ಇನ್ನು ಹೆಚ್ಚಿನ ಅಧಿಕಾರ ಕೊಟ್ಟು ಕೃಷಿಕರಿಗೆ ಬೇಕಾಗಿರುವ ಸೌಲಭ್ಯ ಒದಗಿಸಲು ಹಾಗೂ ಈಗಿರುವ ಮಾರುಕಟ್ಟೆ ವ್ಯವಸ್ಥೆಯಲ್ಲಿ ಆಗುತ್ತಿರುವ ಶೋಷಣೆ ತಪ್ಪಿಸಲು ತೀವ್ರ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಇಲ್ಲ

ಈ) ಕೃಷಿ ಮಾರುಕಟ್ಟೆ ಸಚಿವರು ಹಾಗೂ ಅಧ್ಯಕ್ಷರು, ಕೃಷಿ ಮಾರಾಟ ಮಂಡಳಿ ಇವರ ಅಧ್ಯಕ್ಷತೆಯಲ್ಲಿ ಸಮಿತಿಗಳಿಗೆ ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಉಪ ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ, ತೀರ್ಮಾನ ಕೈಗೊಳ್ಳುವುದು

ಶ್ರೀ ಡಿ ಆರ್ ಪಾಟೀಲ್ ಮಾನ್ಯ ಸಭಾಧ್ಯಕ್ಷರೆ, ದಯಮಾಡಿ ಈ ಕಡೆ ಸ್ವಲ್ಪ ಲಕ್ಷ್ಯ ಕೊಡಬೇಕು

ಅಧ್ಯಕ್ಷರು ಮಂತ್ರಿಗಳು ಲಕ್ಷ್ಯ ಕೊಡಬೇಕು

ಶ್ರೀ ಡಿ ಆರ್ ಪಾಟೀಲ್ ನೀವು ಕೊಡಬೇಕು ಸಾರ್ ಏಕೆಂದರೆ ಮಾನ್ಯ ಮಂತ್ರಿಗಳ interpretation ಸರಿಯಾಗಿಲ್ಲವೆಂದು ನನಗೆ ಅನ್ನಿಸುತ್ತದೆ ಅದಕ್ಕಾಗಿ ತಾವು arbitration ಮಾಡಬೇಕಾಗುತ್ತದೆ ನನ್ನ ಪ್ರಶ್ನೆ ಏನೆಂದರೆ, ಈಗಿರುವ ವ್ಯವಸ್ಥೆಯಲ್ಲಿ ಕೃಷಿ ಮಾರುಕಟ್ಟೆಗಳಿಗೆ ಕಾನೂನಿನಲ್ಲಿರುವ ಸ್ವಾಯತ್ತತೆಯನ್ನು ಸುತ್ತೋಲೆಗಳ ಹಾಗೂ ನಿಯಮಗಳ ಮುಖಾಂತರ ಮೊಟಕುಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂದು ಕೇಳಿದ್ದಕ್ಕೆ ಇಲ್ಲವೆಂದು ಉತ್ತರ ಕೊಟ್ಟಿದ್ದೀರಿ ಇಲ್ಲವೆಂದರೆ, ಮೊಟಕುಗೊಳಿಸಿಲ್ಲವೆಂದು ಹೇಳಿದ ಹಾಗೇನು? ಅಂದರೆ, ಕಾನೂನಿನಲ್ಲಿ ಕೊಟ್ಟಿರತಕ್ಕಂಥ ಅಧಿಕಾರವನ್ನು ನಿಯಮಾವಳಿ ಅಥವಾ ಸುತ್ತೋಲೆಗಳ ಮುಖಾಂತರ ಮೊಟಕುಗೊಳಿಸಿಲ್ಲವೆಂದು ಹೇಳಿದ ಹಾಗೆ ನಿಮ್ಮ ಉತ್ತರ ಆಯಿತು ಆದ್ದರಿಂದ, ಯಾವುದಾದರೂ ಇತ್ತೆಂದರೆ ಫೆಬ್ರವರಿ ತಿಂಗಳ ಕೊನೆಯೊಳಗೆ ಅವುಗಳೆಲ್ಲವನ್ನು ತೆಗೆದು ಹಾಕುತ್ತೀರಾ? ಕಾನೂನಿಗೆ ವಿರುದ್ಧವಾಗಿ ರೂಲ್ಸ್ ಮತ್ತು ಸುತ್ತೋಲೆಗಳ ಮುಖಾಂತರ ನಮ್ಮ ಅಧಿಕಾರವನ್ನು ಮೊಟಕುಗೊಳಿಸಿದರೆ ಅವುಗಳನ್ನು ಈ ತಿಂಗಳ ಅಂತ್ಯದೊಳಗೆ ತೆಗೆದು ಹಾಕುತ್ತೀರಾ? ಏಕೆಂದರೆ, ಯಾವುದೂ ಇಲ್ಲವೆಂದು ನನಗೆ ಉತ್ತರ ಕೊಟ್ಟಿದ್ದೀರಿ ಆದ್ದರಿಂದ, ಅಂತಹ ನಿರ್ದೇಶನಗಳು ಇದ್ದರೆ ಮತ್ತು ಅವುಗಳನ್ನು ನಿಮ್ಮ ಗಮನಕ್ಕೆ ತಂದರೆ ಅದನ್ನು ತೆಗೆದು ಹಾಕುತ್ತೀರಾ?

ಶ್ರೀ ಶರಣಬಸಪ್ಪ ದರ್ಶನಾಪುರ – ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಸದರಿ ಪ್ರಶ್ನೆಗೆ ಕೊಟ್ಟಿರುವ ಉತ್ತರ ಕನ್‌ಫ್ಯೂಷನ್ ಆಗಿದೆ ಮತ್ತೆ ಆಕ್ಟ್ ಬಗ್ಗೆ ಕೂಡ ಕನ್‌ಫ್ಯೂಷನ್ ಆಗಿದೆ ಆದ್ದರಿಂದ ಈ ಪ್ರಶ್ನೆಯನ್ನು ಮುಂದಕ್ಕೆ ಹಾಕಿದರೆ ಸಂಪೂರ್ಣವಾದಂಥ ಮಾಹಿತಿಯನ್ನು ತರುತ್ತೇನೆ ಅವರು ಹೇಳುವುದು ನಿಜವಿದೆ ಏಕೆಂದರೆ,

ಇದರಲ್ಲಿ ಸಂಪೂರ್ಣವಾದಂಥ ಮಾಹಿತಿ ಇಲ್ಲ ಆದ್ದರಿಂದ ಈ ಪ್ರಶ್ನೆಯನ್ನು ಮುಂದಿನ ವಾರ ತೆಗೆದುಕೊಂಡರೆ ಅದಕ್ಕೆ ಸರಿಯಾದ ಉತ್ತರ ಕೊಡತಕ್ಕಂಥ ವ್ಯವಸ್ಥೆ ಮಾಡುತ್ತೇನೆ

ಶ್ರೀ ಡಿ ಆರ್ ಪಾಟೀಲ್ – ಈ ಪ್ರಶ್ನೆಯನ್ನು ಮುಂದಿನವಾರ ತೆಗೆದುಕೊಳ್ಳುವುದಕ್ಕೆ ನನ್ನದೇನು ಅಭ್ಯಂತರವಿಲ್ಲ ಆದರೆ, ಮುಂದಿನ ವಾರ ಸಚಿವರು ಉತ್ತರ ಕೊಡುವುದಕ್ಕಿಂಥ ಮುಂಚೆ ನಾನು ಹೇಳುವುದೇನೆಂದರೆ, ನಾನು ಕೇಳಿರತಕ್ಕಂಥ ಪ್ರಶ್ನೆಗೆ ಸರಿಯಾದ ಉತ್ತರ ಬೇಕು ಸರ್ಕಾರದ ಯಾವುದೇ ಅನುದಾನವಿಲ್ಲದಿದ್ದರೂ ಅನುದಾನ ಪಡೆಯುತ್ತಿರುವ ಪಂಚಾಯತ್ ರಾಜ್ ಸಂಸ್ಥೆಗಳಿಗಿಂತ ಕಡಿಮೆ ಸ್ವಾಯತ್ತತೆಯನ್ನು ಈ ಸಂಸ್ಥೆಗಳು ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ ಎಂದು ನಾನು ಕೇಳಿರುವ ಮೂರನೇ ಪ್ರಶ್ನೆಗೂ ಇಲ್ಲವೆಂದು ಉತ್ತರ ಕೊಟ್ಟಿದ್ದಾರೆ ಒಂದು ಗ್ರಾಮ ಪಂಚಾಯತ್‌ನಲ್ಲಿ 1 ಕೋಟಿ ರೂಪಾಯಿಗಳವರೆಗೆ ಟೆಂಡರ್ ಕರೆಯುತ್ತಾರೆ ನಮಗೆ ಒಂದು ಸಾವಿರ ರೂಪಾಯಿಗೆ ಕರೆಯುವುದಕ್ಕೆ ಆಗುವುದಿಲ್ಲ

ಶ್ರೀ ಶರಣಬಸಪ್ಪ ದರ್ಶನಾಪುರ – ಮುಂದಿನ ವಾರ ಈ ಪ್ರಶ್ನೆ ತೆಗೆದುಕೊಳ್ಳಿ, ಸಂಪೂರ್ಣವಾದ ಉತ್ತರ ಕೊಡುತ್ತೇನೆ

ಅಧ್ಯಕ್ಷರು – ಮಾನ್ಯ ಮಂತ್ರಿಗಳೆ, ತಾವು ಇದರ ಬಗ್ಗೆ ಚರ್ಚೆ ಮಾಡಿ ಆನಂತರ ಉತ್ತರವನ್ನು ಕೊಡಿ

ಶ್ರೀ ಎಸ್ ಎಸ್ ಪಾಟೀಲ್ – ನಿಮ್ಮೆಲ್ಲರನ್ನು ಕೇಳಿ ವಿಷಯ ಸಮಿತಿಯಲ್ಲಿ ಇದಕ್ಕೆ ಸಂಬಂಧಪಟ್ಟಂತೆ ವರದಿ ಕೂಡ ಕೊಟ್ಟಿದ್ದೇವೆ ನಿಮ್ಮ ಅಧಿಕಾರಿಗಳಿಗೆ ಬಿಟ್ಟು ಕೊಡುವಂಥ ಮನಸ್ಸು ಇಲ್ಲ ಏಕೆಂದರೆ, ಅಧಿಕಾರ ವಿಕೇಂದ್ರೀಕರಣ ಎಂದು ಹೇಳಿ ಕೇವಲ ಪಂಚಾಯತ್‌ಗೆ ಅಧಿಕಾರ ಕೊಟ್ಟರೆ ಆಗುವುದಿಲ್ಲ ಇವತ್ತಿನ ದಿವಸ ಅಲ್ಲಿಯೂ ಕೂಡ ಚುನಾಯಿತ ಪ್ರತಿನಿಧಿಗಳಿದ್ದಾರೆ ಆದರೆ, ಇಲ್ಲಿ ಕಸ ಹೊಡೆಯುವುದಕ್ಕೆ 10 ರೂಪಾಯಿ ಖರ್ಚಾದರೂ ಆ ಹಣ ಇವರಿಂದ ಬರಬೇಕಾಗಿದೆ ಅಲ್ಲಿರತಕ್ಕಂಥ ಚುನಾಯಿತ ಪ್ರತಿನಿಧಿಗಳಿಗೆ ಯಾವುದೇ ಅಧಿಕಾರ ಇಲ್ಲ ಅದ್ದರಿಂದ ಅವರಿಗೂ ಕೂಡ ಅಧಿಕಾರ ಕೊಡಿ ಇಲ್ಲದಿದ್ದರೆ ಅವರನ್ನು ತೆಗೆದು ಬಿಡಿ

ಶ್ರೀ ಶರಣಬಸಪ್ಪ ದರ್ಶನಾಪುರ – ಕೃಷಿ ಮಾರುಕಟ್ಟ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರ ಕೊಡುವುದರ ಬಗ್ಗೆ ನಾವೂ ಕೂಡ ಬದ್ದರಾಗಿದ್ದೇವೆ ಈಗಾಗಲೇ ಎಲ್ಲಾ ಅಧ್ಯಕರ ಒಂದು ಸಮಿತಿ ಮಾಡಿದ್ದೇವೆ ಇದರಲ್ಲಿ

APMC ಅಧ್ಯಕ್ಷರೆಲ್ಲರೂ ಕೂಡ ಸದಸ್ಯರಾಗಿದ್ದಾರೆ ಅಧಿಕಾರ ಕೊಡುವುದರ ಪರವಾಗಿ ನಾವೂ ಕೂಡ ಇದ್ದೇವೆ ಈ ಪ್ರಶ್ನೆಯನ್ನು ಮುಂದಿನ ವಾರ ತೆಗೆದುಕೊಂಡರೆ ಪೂರ್ಣವಾದ ಉತ್ತರವನ್ನು ಕೊಡುತ್ತೇನೆ

ಅಧ್ಯಕ್ಷರು – ಆಯಿತು

ರಾಷ್ಟ್ರೀಯ ತೋಟಗಾರಿಕಾ ಮಿಷನ್ ಕಾರ್ಯಕ್ರಮ

60(258) ಶ್ರೀ ಕುಮಾರ ಬಂಗಾರಪ್ಪ ಎಸ್ (ಸೊರಬ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ರಾಷ್ಟ್ರೀಯ ತೋಟಗಾರಿಕೆ ಮಿಷನ್‌ನಲ್ಲಿ ರಾಜ್ಯದ ಯಾವ ಯಾವ ಜಿಲ್ಲೆಗಳು ಸೇರ್ಪಡೆಗೊಂಡಿರುತ್ತದೆ ,

ಆ) ಈ ಕಾರ್ಯಕ್ರಮ ಅನುಷ್ಠಾನಗೊಂಡಿದೆಯೇ ಅನುಷ್ಠಾನಗೊಳ್ಳದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ್ (ತೋಟಗಾರಿಕೆ ಸಚಿವರು)

ಅ) ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಗೆ ಸೇರ್ಪಡೆಯಾಗಿರುವ ರಾಜ್ಯದ ಜಿಲ್ಲೆಗಳು 1) ಬೆಂಗಳೂರು (ಗ್ರಾಮಾಂತರ), 2) ತುಮಕೂರು, 3) ಮೈಸೂರು, 4)ಕೋಲಾರ, 5) ಚಿತ್ರದುರ್ಗ, 6) ಬೆಳಗಾಂ, 7) ಬಾಗಲಕೋಟೆ, 8) ಬಿಜಾಪುರ, 9)ಕೊಡಗು, 10) ಕೊಪ್ಪಳ, 11) ಹಾಸನ, 12) ಗುಲ್ಬರ್ಗ, 13) ಉಡುಪಿ, 14) ದಕ್ಷಿಣ ಕನ್ನಡ, 15) ಉಡುಪಿ, 16) ಶಿವಮೊಗ್ಗ, 17) ಚಿಕ್ಕಮಗಳೂರು

ಆ) ಹೌದು, ಅನುಷ್ಠಾನಗೊಂಡಿದೆ

ಶ್ರೀ ಎಸ್ ಕುಮಾರ ಬಂಗಾರಪ್ಪ – ಮಾನ್ಯ ಅಧ್ಯಕ್ಷರೆ, ಇದರಲ್ಲಿ ಯಾವ್ಯಾವ ಜಿಲ್ಲೆಗಳು ಒಳಪಟ್ಟಿವೆಂದು ಕೇಳಿರತಕ್ಕಂಥ ಪ್ರಶ್ನೆಗೆ ಉತ್ತರದಲ್ಲಿ 17 ಜಿಲ್ಲೆಗಳ ಹೆಸರುಗಳನ್ನು ಕೊಟ್ಟಿದ್ದಾರೆ ಮತ್ತೆ ಅನುಷ್ಠಾನಗೊಂಡಿದೆಯೇ ಎಂದು ಕೇಳಿರುವುದಕ್ಕೆ , ಹೌದು, "ಎಂದು ಉತ್ತರ ಕೊಟ್ಟಿದ್ದಾರೆ ಈ ಅನುಷ್ಠಾನಗೊಂಡಿರತಕ್ಕಂಥ ವಿಚಾರದ ಬಗ್ಗೆ ನಾನು ಮಾನ್ಯ ಉಪ ಮುಖ್ಯ ಮಂತ್ರಿಯವರ ಗಮನವನ್ನು ಸೆಳೆಯುವುದಕ್ಕೆ ಇಷ್ಟಪಡುತ್ತೇನೆ ಇವತ್ತಿನ ದಿವಸ ಎಲ್ಲೆಲ್ಲಿ National Horticulture Mission Schemeಗೆ ಜಿಲ್ಲೆಗಳನ್ನು ಸೇರ್ಪಡೆ ಮಾಡಿದ್ದಾರೆಯೋ ಅಂಥ ಕಡೆ ಸಪೋರ್ಟಿಂಗ್ ಆಗಿ ಕೆಲವು ಕಾರ್ಯಕ್ರಮಗಳು ಅನುಷ್ಠಾನವಾಗಬೇಕಾದ ಅವಶ್ಯಕತೆ ಇದೆ